

ಸಾಮಾನ್ಯ ಅಧ್ಯಯನ

ದ್ರೋಣಾಚಾರ್ಯ ಅಕಾಡೆಮಿ – ಬೆಂಗಳೂರು

ಸಾಮಾನ್ಯ ಅಧ್ಯಯನ

2024 ಡಿಸೆಂಬರ್ 16 ರಂದು ದ್ರೋಣಾಚಾರ್ಯ ಅಕಾಡೆಮಿಯಲ್ಲಿ (ಆನ್‌ಲೈನ್ ಪರೀಕ್ಷೆ) ನಡೆದ Super 30 mcq's ಪ್ರಶ್ನೆಗಳು ಮತ್ತು ಉತ್ತರಗಳು

1. 2024ರ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ನವೆಂಬರ್ 25 ರಿಂದ ಡಿಸೆಂಬರ್ 12ರವರೆಗೆ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಸಿಂಗಾಪುರದಲ್ಲಿ ನಡೆಯಿತು.

2) ನಿರ್ಣಾಯಕ ಪಂದ್ಯದಲ್ಲಿ ಚೀನಾ ದೇಶದ ಡಿಂಗ್ ಲಿರೆನ್‌ರವರನ್ನು ಸೋಲಿಸಿದ ಭಾರತದ ಯುವ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್‌ರವರು ವಿಶ್ವ ಚಾಂಪಿಯನ್ ಪಟ್ಟಕ್ಕೆ ಏರಿದ ಪ್ರಪಂಚದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಇತಿಹಾಸ ಬರೆದರು.

3) ಡಿ.ಗುಕೇಶ್‌ರವರು ವಿಶ್ವ ಚೆಸ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದ 2ನೇ ಭಾರತೀಯ. ಈ ಮೊದಲು ವಿಶ್ವನಾಥನ್ ಆನಂದ್‌ರವರು 2000, 2007, 2008, 2010 ಮತ್ತು 2012ರಲ್ಲಿ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಪ್ರಶಸ್ತಿ ಪಡೆದಿದ್ದಾರೆ. (ಒಟ್ಟು 5 ಬಾರಿ)

4) ಚೆಸ್ ದಂತಕಥೆಯಾದ ರಷ್ಯಾ ದೇಶದ ಗ್ಯಾರಿ ಕ್ಯಾಸ್ಪರೋವ್‌ರವರು 22ನೇ ವಯಸ್ಸಿನಲ್ಲಿ (1985ರಲ್ಲಿ) ಚಾಂಪಿಯನ್ ಆಗಿದ್ದು, ಇದುವರೆಗಿನ ದಾಖಲೆಯಾಗಿತ್ತು. ಡಿ.ಗುಕೇಶ್‌ರವರು 18ನೇ ವಯಸ್ಸಿನಲ್ಲಿ ಈ ಸಾಧನೆ ಮಾಡಿದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 1 ಮತ್ತು 2 ಸರಿಯಾಗಿವೆ.
ಸಿ) 1 ಮತ್ತು 3 ಸರಿಯಾಗಿವೆ.
ಡಿ) 1, 2, 3 ಮತ್ತು 4 ಸರಿಯಾಗಿವೆ.

ಉತ್ತರ : ಡಿ) 1, 2, 3 ಮತ್ತು 4 ಸರಿಯಾಗಿವೆ.

ಇತಿಹಾಸ ಬರೆದ ಭಾರತದ ಯುವ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್

ವಿಶ್ವ ಚೆಸ್ ಚಾಂಪಿಯನ್ ಪಟ್ಟಕ್ಕೇರಿದ ಪ್ರಪಂಚದ ಅತ್ಯಂತ ಕಿರಿಯ ಆಟಗಾರ

ವಿಶ್ವ ಚದುರಂಗ ಸಾಮ್ರಾಟ – ಡಿ.ಗುಕೇಶ್

ಚೀನಾದ ಡಿಂಗ್ ಲಿರೆನ್ ವಿರುದ್ಧ ಗೆದ್ದು ವಿಶ್ವ ಚೆಸ್ ಕಿರೀಟ ಮುಡಿಗೇರಿಸಿಕೊಂಡ ಭಾರತೀಯ ಆಟಗಾರ – ಡಿ.ಗುಕೇಶ್

ಕರ್ನಾಟಕ ಬಜೆಟ್ 2024–25ರ ತರಗತಿಗಳು – **Santhosh H R Sir**

https://dhronacharyaacademy.com/courses/sbv/

ಸಾಮಾನ್ಯ ಅರ್ಥಶಾಸ್ತ್ರ – 8, 9, 10 ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮ ಆಧಾರಿತ 50 ಘಂಟೆಗಳ ಸಂಪೂರ್ಣ ತರಗತಿಗಳು

Mohammed Taslim Sir

https://dhronacharyaacademy.com/general-economics-1/

ಸಾಮಾನ್ಯ ಅಧ್ಯಯನ ತರಗತಿಗಳು – **ANAND SIR GK**

https://dhronacharyaacademy.com/general-knowledge/

ಇಂಗ್ಲೀಷ್ ತರಗತಿಗಳು – **K. Kattimani SIR**

https://dhronacharyaacademy.com/english/

2. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) ರಾಜಾರಾಮ್ ಮೋಹನ್ ರಾಯ್‌ರವರ ಪತ್ರಿಕೆಗಳು – "ಸಂವಾದ ಕೌಮುದಿ" (ಬಂಗಾಳಿ ಭಾಷೆ), ಮೀರತ್–ಉಲ್–ಅಕ್ಬರ್, ಬ್ರಹ್ಮ ನಿಕಲ್ ಮತ್ತು ಕಲ್ಕತ್ತಾ ಗೆಜೆಟ್ ಮುಂತಾದವು.

ಬಿ) ರಾಜಾರಾಮ್ ಮೋಹನ್ ರಾಯ್‌ರವರನ್ನು "ಭಾರತೀಯ ಪುನರುಜ್ಜೀವನದ ಪಿತಾಮಹ" ಮತ್ತು "ಭಾರತೀಯ ಪುನರುಜ್ಜೀವನದ ಧ್ರುವತಾರೆ" ಎಂದು ಕರೆಯುತ್ತಾರೆ.

ಸಿ) ಬ್ರಹ್ಮ ಸಮಾಜದ ಸ್ಥಾಪಕರು – ರಾಜಾರಾಮ್ ಮೋಹನ್ ರಾಯ್

ಡಿ) ಆರ್ಯ ಸಮಾಜದ ಸ್ಥಾಪಕರು – ಮಹಾತ್ಮ ಜ್ಯೋತಿಬಾ ಫುಲೆ

ಉತ್ತರ : ಡಿ) ಆರ್ಯ ಸಮಾಜದ ಸ್ಥಾಪಕರು – ಮಹಾತ್ಮ ಜ್ಯೋತಿಬಾ ಫುಲೆ

ಆರ್ಯ ಸಮಾಜದ ಸ್ಥಾಪಕರು – ಸ್ವಾಮಿ ದಯಾನಂದ ಸರಸ್ವತಿ

3. ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ

1) ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್" ಎಂಬ ಸಂಸ್ಥೆಯನ್ನು ಸರ್ ವಿಲಿಯಂ ಜೋನ್ಸ್‌ರವರು 1784ರಲ್ಲಿ ಸ್ಥಾಪಿಸಿದರು.

2) ಲಾರ್ಡ್ ಕಾರ್ನ್‌ವಾಲೀಸ್ 1793ರಲ್ಲಿ "ಶಾಶ್ವತ ಭೂ ಕಂದಾಯ ಪದ್ಧತಿ" (The Permanent Land Revenue Settlement) ಯನ್ನು ಜಾರಿಗೊಳಿಸಿದನು.

3) ಲಾರ್ಡ್ ಕಾರ್ನ್‌ವಾಲೀಸ್ "ಸಹಾಯಕ ಸೈನ್ಯ ಪದ್ಧತಿ" (1798) ಯನ್ನು ಜಾರಿಗೊಳಿಸಿದನು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಸಿ) 1 ಮತ್ತು 2 ಸರಿಯಾಗಿವೆ.

ಲಾರ್ಡ್ ವೆಲ್ಲೆಸ್ಲಿ **"ಸಹಾಯಕ ಸೈನ್ಯ ಪದ್ಧತಿ"** (1798) ಯನ್ನು ಜಾರಿಗೊಳಿಸಿದನು.

ಲಾರ್ಡ್ ವೆಲ್ಲೆಸ್ಲಿ

4. ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. ಲಾರ್ಡ್ ಕಾರ್ನ್ ವಾಲೀಸ್ "ಪೊಲೀಸ್ ಇಲಾಖೆ"ಯಲ್ಲಿ ಬಹಳಷ್ಟು ಸುಧಾರಣೆಗಳನ್ನು ತಂದನು.
2. ಲಾರ್ಡ್ ವಿಲಿಯಂ ಬೆಂಟಿಂಕ್‌ನು ಭಾರತಕ್ಕೆ ಇಂಗ್ಲೀಷ್ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಿದನು.
3. ಲಾರ್ಡ್ ಡಾಲ್‌ಹೌಸಿ 1848ರಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೊಳಿಸಿದನು.
4. ಲಾರ್ಡ್ ಹಾರ್ಡಿಂಜ್ ಭಾರತದ ಪ್ರಥಮ ವೈಸರಾಯ್

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.

ಲಾರ್ಡ್ ಕ್ಯಾನಿಂಗ್ ಭಾರತದ ಪ್ರಥಮ ವೈಸರಾಯ್



ಲಾರ್ಡ್ ಕ್ಯಾನಿಂಗ್

5. ಈ ಕೆಳಗಿನ ಜೋಡಿಗಳನ್ನು ಪರಿಶೀಲಿಸಿ–

1. ಕಬ್ಬಿಣ – ಹೆಮಟೈಟ್, ಮ್ಯಾಗ್ನಟೈಟ್, ಲಿಮೊನೈಟ್, ಸಿಡರೈಟ್
2. ತಾಮ್ರ – ಚಾಲ್ಕೋಪೈರೈಟ್ಸ್, ಗ್ಲಾನ್ಸ್, ಕ್ಯುಪ್ರೈಟ್, ಮೆಲಕೈಟ್, ಅಜುರೈಟ್
3. ಸೀಸ – ಗಲೀನಾ
4. ಯುರೇನಿಯಂ – ಡೋಲೋಮೈಟ್

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

ಎ) ಒಂದು ಜೋಡಿ ಮಾತ್ರ ಸರಿಯಾಗಿದೆ.

ಬಿ) ಎರಡು ಜೋಡಿಗಳು ಮಾತ್ರ ಸರಿಯಾಗಿವೆ.

ಸಿ) ಮೂರು ಜೋಡಿಗಳು ಮಾತ್ರ ಸರಿಯಾಗಿವೆ.

ಡಿ) ಮೇಲಿನ ಎಲ್ಲಾ ಜೋಡಿಗಳು ಸರಿಯಾಗಿವೆ.

ಉತ್ತರ : ಸಿ) ಮೂರು ಜೋಡಿಗಳು ಮಾತ್ರ ಸರಿಯಾಗಿವೆ.

ಯುರೇನಿಯಂ – ಪ್ಲಿಚ್‌ಬ್ಲೆಂಡ್

6. ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. ಗುರುನಾನಕರವರು ಕರ್ನಾಟಕದ ಬೀದರ್ ಜಿಲ್ಲೆಗೆ ಭೇಟಿ ನೀಡಿದ್ದರು.
2. ರಣಜಿತ್ ಸಿಂಗ್‌ನ ಕಾಲದಲ್ಲಿ ಕ್ರಿ.ಶ 1809ರಲ್ಲಿ ಬ್ರಿಟಿಷರ ಮತ್ತು ಸಿಖ್‌ರ ನಡುವೆ ಅಮೃತಸರ ಒಪ್ಪಂದ ನಡೆಯಿತು.
3. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ದೇಶಿಯ ಅರಸ – ಹೈದ್ರಾಬಾದಿನ ನಿಜಾಮ
4. ಮಾಪಿಳ್ಳೆ ದಂಗೆ ಅಥವಾ ಮಲಬಾರ್ ದಂಗೆ ಕಾರ್ಮಿಕರಿಗೆ ಸಂಬಂಧಿಸಿದೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

ಎ) 1 ಮತ್ತು 2 ಮಾತ್ರ ಸರಿಯಾಗಿವೆ. ಬಿ) 2 ಮತ್ತು 3 ಮಾತ್ರ ಸರಿಯಾಗಿವೆ.

ಸಿ) 1, 2 ಮತ್ತು 3 ಮಾತ್ರ ಸರಿಯಾಗಿವೆ. ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

ಉತ್ತರ : ಸಿ) 1, 2 ಮತ್ತು 3 ಮಾತ್ರ ಸರಿಯಾಗಿವೆ.

ಮಾಪಿಳ್ಳೆ ದಂಗೆ ಅಥವಾ ಮಲಬಾರ್ ದಂಗೆ ರೈತರಿಗೆ ಸಂಬಂಧಿಸಿದೆ.

7. ಕರ್ನಾಟಕ ಹಣಕಾಸು ಆಯೋಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಯಾವುದು ಸರಿಯಾಗಿರುವುದಿಲ್ಲ ?

ಎ) ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನು ಮಾನ್ಯ ಮುಖ್ಯಮಂತ್ರಿಯವರು ನೇಮಕ ಮಾಡುತ್ತಾರೆ.

ಬಿ) ಕರ್ನಾಟಕದ 5ನೇ ಹಣಕಾಸು ಆಯೋಗದ ಅಧ್ಯಕ್ಷರು – ಮಾಜಿ ಸಂಸದ ಸಿ. ನಾರಾಯಣ ಸ್ವಾಮಿ

ಸಿ) ಕರ್ನಾಟಕದ 5ನೇ ಹಣಕಾಸು ಆಯೋಗದ ಸದಸ್ಯರು – ಮೊಹಮ್ಮದ್ ಸನಾವುಲ್ಲಾ ಮತ್ತು ಆರ್.ಎಸ್ ಪೋಂಡೆ

ಡಿ) ರಾಜ್ಯ ಹಣಕಾಸು ಆಯೋಗವು ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸ್ಥಿತಿಗತಿಯನ್ನು ಪರಾಮರ್ಶೆ ನಡೆಸಿ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡುತ್ತದೆ.

ಉತ್ತರ : ಎ) ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನು ಮಾನ್ಯ ಮುಖ್ಯಮಂತ್ರಿಯವರು ನೇಮಕ ಮಾಡುತ್ತಾರೆ.

ವಿವರಣೆ –

ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ.

8. ಸಮಾಜಶಾಸ್ತ್ರಜ್ಞ ಡಾ॥ ಜಿ.ಎಸ್ ಘುರ್ಯೆರವರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ

1. ಭಾರತದಲ್ಲಿ ಸಮಾಜಶಾಸ್ತ್ರವನ್ನು ಜನಪ್ರಿಯಗೊಳಿಸುವಲ್ಲಿ ಡಾ॥ ಜಿ.ಎಸ್ ಘುರ್ಯೆರವರು ಪ್ರಮುಖ ಪಾತ್ರ ವಹಿಸಿದ್ದರಿಂದ ಇವರನ್ನು ಭಾರತೀಯ ಸಮಾಜಶಾಸ್ತ್ರದ ಪಿತಾಮಹ ಎಂದು ಕರೆಯುತ್ತಾರೆ.
2. ಫ್ಯಾಮಿಲಿ ಅಂಡ್ ಕಿನ್ ಇನ್ ಇಂಡೋ ಯುರೋಪಿಯನ್ ಕಲ್ಚರ್ ಎಂಬ ಇವರ ಅಧ್ಯಯನವು ಭಾರತೀಯ ಸಮಾಜ ಹಾಗೂ ಸಂಸ್ಕೃತಿಯ ಹಿಂದಿನ ವಿಕಾಸವನ್ನು ತಿಳಿಯುವುದರ ಜೊತೆಗೆ ವರ್ತಮಾನದ ಭಾರತೀಯ ಸಾಮಾಜಿಕ ಸಮಸ್ಯೆಗಳು ಹಾಗೂ ತುಡಿತಗಳನ್ನು ವಿಶ್ಲೇಷಿಸಿದೆ.
3. ಡಾ॥ ಜಿ.ಎಸ್ ಘುರ್ಯೆರವರು "ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ, ಷೆಡ್ಯೂಲ್ ಟ್ರೈಬ್ಸ್, ಸೋಷಿಯಲ್ ಟೆನ್ಷನ್ ಇನ್ ಇಂಡಿಯಾ, ವೇದಿಕ್ ಇಂಡಿಯಾ, ಭಾರತೀಯ ಸಾದುಗಳು, ಭಾರತೀಯ ಪೋಷಾಕುಗಳು(Indian costumes) ಎಂಬ ಮುಂತಾದ 30ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.
4. ಇಂಡಿಯನ್ ಸೋಷಿಯಲಾಜಿಕಲ್ ಸೊಸೈಟಿ (ISS)ಎಂಬ ಸಂಘಟನೆಯನ್ನು ಸ್ಥಾಪಿಸಿ "ಸೋಷಿಯಲಾಜಿಕಲ್ ಬುಲೆಟಿನ್" ಎಂಬ ಪ್ರಕಟಣೆಯನ್ನು ಆರಂಭಿಸಿದ ಸಾಧನೆ ಡಾ॥ ಜಿ.ಎಸ್ ಘುರ್ಯೆರವರಿಗೆ ಸಲ್ಲುತ್ತದೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

ಎ) 1 ಮತ್ತು 2 ಮಾತ್ರ ಸರಿಯಾಗಿವೆ.
ಬಿ) 2 ಮತ್ತು 3 ಮಾತ್ರ ಸರಿಯಾಗಿವೆ.
ಸಿ) 1, 2 ಮತ್ತು 3 ಮಾತ್ರ ಸರಿಯಾಗಿವೆ.
ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

ಉತ್ತರ : ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

Nayaka Sir

ಭಾರತೀಯ ಸಮಾಜಶಾಸ್ತ್ರದ ಪಿತಾಮಹ – ಡಾ॥ ಜಿ.ಎಸ್ ಘುರ್ಯೆ

ಸಮಾಜಶಾಸ್ತ್ರದ ಪಿತಾಮಹ – ಆಗಸ್ಟ್ ಕಾಮ್ಟ್

ಆಗಸ್ಟ್ ಕಾಮ್ಟ್

9. ಸಮಾಜಶಾಸ್ತ್ರಜ್ಞ ಡಾ॥ ಎಂ.ಎನ್ ಶ್ರೀನಿವಾಸ್‌ರವರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ

1. ಡಾ॥ ಮೈಸೂರು ನರಸಿಂಹಚಾರ್ ಶ್ರೀನಿವಾಸ್‌ರವರು ಭಾರತದ ಆರಂಭಿಕ ಸಮಾಜಶಾಸ್ತ್ರಜ್ಞ ಹಾಗೂ ಸಾಮಾಜಿಕ ಮಾನವ ಶಾಸ್ತ್ರಜ್ಞರಾಗಿದ್ದಾರೆ.
2. ಡಾ॥ ಎಂ.ಎನ್ ಶ್ರೀನಿವಾಸ್‌ರವರು ಸಮಾಜಶಾಸ್ತ್ರದ ಅಧ್ಯಯನದಲ್ಲಿ ಗ್ರಾಂಥಿಕ ದೃಷ್ಟಿಕೋನಕ್ಕೆ (Book View) ಬದಲಾಗಿ ಕ್ಷೇತ್ರಾಧ್ಯಯನ (Field Work) ದಿಂದ ಹೆಚ್ಚು ಜನಪ್ರಿಯರಾಗಿದ್ದಾರೆ.
3. ರಿಲಿಜನ್ ಅಂಡ್ ಸೊಸೈಟಿ ಅಮಾಂಗ್ ದಿ ಕೂರ್ಗ್ಸ್ ಆಫ್ ಸೌತ್ ಇಂಡಿಯಾ (ದಕ್ಷಿಣ ಭಾರತದ ಕೊಡವರ ಧರ್ಮ ಮತ್ತು ಸಮಾಜ), ಇಂಡಿಯನ್ ವಿಲೇಜಸ್, ಕಾಸ್ಟ್ ಇನ್ ಮಾರ್ಡ್ರನ್ ಇಂಡಿಯಾ ಅಂಡ್ ಅದರ್ ಎಸ್ಸೇಸ್, ಸೋಷಿಯಲ್ ಛೇಂಜ್ ಇನ್ ಮಾರ್ಡ್ರನ್ ಇಂಡಿಯಾ, ರಿಮೆಂಬರ್ಡ್ ವಿಲೇಜ್ ಮತ್ತು 21ನೇ ಶತಮಾನದಲ್ಲಿ ಜಾತಿ ಮತ್ತು ಅದರ ಹೊಸ ರೂಪ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

ಎ) 1 ಮಾತ್ರ ಸರಿಯಾಗಿವೆ.
ಬಿ) 1 ಮತ್ತು 2 ಮಾತ್ರ ಸರಿಯಾಗಿವೆ.
ಸಿ) 2 ಮತ್ತು 3 ಮಾತ್ರ ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

ಸಮಾಜಶಾಸ್ತ್ರಜ್ಞ – ಡಾ॥ ಎಂ.ಎನ್ ಶ್ರೀನಿವಾಸ್



10. ಸಮಾಜಶಾಸ್ತ್ರಜ್ಞೆ ಡಾ॥ ಇರಾವತಿ ಕರ್ವೆರವರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. ಡಾ॥ ಇರಾವತಿ ಕರ್ವೆರವರು "ಭಾರತದ ಪ್ರಪ್ರಥಮ ಮಹಿಳಾ ಸಮಾಜಶಾಸ್ತ್ರಜ್ಞೆ" ಎಂಬ ಪ್ರಸಿದ್ಧಿ ಪಡೆದಿದ್ದಾರೆ.
2. ಡಾ॥ ಇರಾವತಿ ಕರ್ವೆರವರು "ಕಿನ್‌ಷಿಪ್ ಆರ್ಗನೈಸೇಷನ್ ಇನ್ ಇಂಡಿಯಾ, ಹಿಂದೂ ಸೊಸೈಟಿ ಆ್ಯನ್ ಇಂಟರ್‌ಪ್ರಿಟೇಷನ್, ಫ್ಯಾಮಿಲಿ ಇನ್ ಇಂಡಿಯಾ ಮತ್ತು ಲ್ಯಾಂಡ್ ಅಂಡ್ ಪೀಪಲ್ ಆಫ್ ಮಹಾರಾಷ್ಟ್ರ ಮುಂತಾದ 7ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.
3. ಡಾ॥ ಇರಾವತಿ ಕರ್ವೆರವರು ಮರಾಠಿ ಭಾಷೆಯಲ್ಲಿ ಹೆಚ್ಚಿನ ಪಾಂಡಿತ್ಯ ಹೊಂದಿದ್ದರು. ಯುಗಾಂತ ಎಂಬ ಇವರ ಕೃತಿಗೆ ಮಹಾರಾಷ್ಟ್ರ ಪ್ರಾದೇಶಿಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಲಾಗಿದೆ.
4. ಅಮ್‌ಚಿ ಸಂಸ್ಕೃತಿ, ಮರಾಠಿ ಲೋಕಾಂಚಿ ಸಂಸ್ಕೃತಿ, ಹಿಂದೂ ಸಾಮಾಜಿಕ ಸಮಾಜ ರಚನಾ ಇವು ಡಾ॥ ಇರಾವತಿ ಕರ್ವೆರವರ ಇತರ ಮರಾಠಿ ಕೃತಿಗಳು

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

“ಭಾರತದ ಪ್ರಪ್ರಥಮ ಮಹಿಳಾ ಸಮಾಜಶಾಸ್ತ್ರಜ್ಞೆ” – ಡಾ॥ ಇರಾವತಿ ಕರ್ವೆ

11. ಸಮಾಜಶಾಸ್ತ್ರಜ್ಞ ಎ.ಆರ್ ದೇಸಾಯಿರವರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ

1) ಅಕ್ಷಯ್ ರಮಣಲಾಲ್ ದೇಸಾಯಿರವರು ಕ್ರಿ.ಶ 1915ರಲ್ಲಿ ಜನಿಸಿದರು.

2) ದಿ ಸೋಷಿಯಾಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಲಿಸಂ ಇವರ ಪ್ರಸಿದ್ಧ ಕೃತಿಯಾಗಿದೆ. ಎ.ಆರ್ ದೇಸಾಯಿರವರು ಕಲ್ಯಾಣ ರಾಜ್ಯದ ಬಗ್ಗೆಯೂ ಬರೆದಿದ್ದಾರೆ.

3) ಎ.ಆರ್ ದೇಸಾಯಿರವರ ರೂರಲ್ ಸೋಷಿಯಾಲಜಿ ಇನ್ ಇಂಡಿಯಾ (ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರ) ಎಂಬ ಗ್ರಂಥವು ಭಾರತದಲ್ಲಿ ಗ್ರಾಮೀಣ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ನಿಶ್ಚಿತ ತಿರುವು ಹಾಗೂ ಪ್ರವೃತ್ತಿಯನ್ನು ನೆಲೆಗೊಳಿಸಿತು. ಇವರನ್ನು ಇಂಡಿಯನ್ ಸೋಷಿಯಾಲಜಿಕಲ್ ಸೊಸೈಟಿಯ ಚುನಾಯಿತ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

12. ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. ಸೂರ್ಯನಲ್ಲಿ ಬೈಜಿಕ ಸಮ್ಮಿಲನ (Nuclear Fusion) ಪ್ರಕ್ರಿಯೆಯ ಮೂಲಕ ಬೆಳಕು ಉತ್ಪತ್ತಿಯಾಗುತ್ತದೆ.
2. ಸೂರ್ಯನಲ್ಲಿರುವ ಅನಿಲಗಳು – ಹೈಡ್ರೋಜನ್, ಹೀಲಿಯಂ.
3. 2023 ಸೆಪ್ಟೆಂಬರ್ 2ರಂದು ಭಾರತದ ಇಸ್ರೋ ಸೌರ ಮಾರುತಗಳ ಅಧ್ಯಯನಕ್ಕಾಗಿ ಆದಿತ್ಯ ಎಲ್–1 ನೌಕೆಯನ್ನು ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಕಾಶ ಕೇಂದ್ರದಿಂದ ಪಿಎಸ್ಎಲ್‌ವಿ–ಸಿ57 ರಾಕೆಟ್ ಮೂಲಕ ಉಡಾವಣೆ ಮಾಡಿತು. ಈ ನೌಕೆಯು 2024 ಜನವರಿ 6ರಂದು ನಾಲ್ಕನೇ ಹಂತದಿಂದ ಪ್ರತ್ಯೇಕಗೊಂಡು ಎಲ್–1 ಕಕ್ಷೆಯನ್ನು ಸೇರ್ಪಡೆಗೊಂಡಿತು.
4. ಸೂರ್ಯನ ಸುತ್ತ ಇರುವ ಗ್ರಹಗಳು ಅನುಕ್ರಮವಾಗಿ – ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ, ಯುರೇನಸ್, ನೆಪ್ಚೂನ್.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ. ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.

ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ. ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

13. ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ

1) ಪ್ರಪ್ರಥಮವಾಗಿ ಮಂಗಳ ಗ್ರಹವನ್ನು ಅಧ್ಯಯನ ಮಾಡಲು ಬಾಹ್ಯಾಕಾಶಕ್ಕೆ ಕಳುಹಿಸಿದ ನೌಕೆ – Mariner 4(ಮ್ಯಾರಿನರ್ 4) (1964 ನವೆಂಬರ್ 28)

2) ಮಂಗಳ ಗ್ರಹವನ್ನು ಕೆಂಪು ಗ್ರಹ, ಕುಜ ಮತ್ತು ಅಂಗಾರಕ ಎಂದು ಕರೆಯುತ್ತಾರೆ.

3) ಮಂಗಳ ಗ್ರಹವು ಕೆಂಪಾಗಿ ಕಾಣಲು ಕಾರಣ – ಕಬ್ಬಿಣದ ಆಕ್ಸೈಡ್ (Iron oxide)

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

14. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ವ್ಯಾನ್ ಸರೋವರ	I. ಜೋರ್ಡಾನ್
ಬಿ) ಮೃತ ಸಮುದ್ರ	II. ಏಷ್ಯಾ ಮತ್ತು ಆಫ್ರಿಕಾ
ಸಿ) ಸಾಂಬಾರ್ ಸರೋವರ	III. ಟರ್ಕಿ
ಡಿ) ಕೆಂಪು ಸಮುದ್ರ	IV. ಭಾರತ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (III) (I)
ಡಿ) (III) (I) (IV) (II)

ಉತ್ತರ : ಡಿ) (III) (I) (IV) (II)

15. ಈ ಕೆಳಗಿನವುಗಳಲ್ಲಿ ಯಾವುದು ಶೀತೋಧಕ ಪ್ರವಾಹವಾಗಿದೆ ?

ಎ) ಗಲ್ಫ್ ಸ್ಟ್ರೀಂ (Gulf stram)

ಬಿ) ಲ್ಯಾಬ್ರಾಡರ್ ಪ್ರವಾಹ (Labrador Current)

ಸಿ) ಬ್ರೆಜಿಲ್ ಪ್ರವಾಹ (Brazil current)

ಡಿ) ಫ್ಲೋರಿಡಾ (florida current)

ಉತ್ತರ : ಬಿ) ಲ್ಯಾಬ್ರಾಡರ್ ಪ್ರವಾಹ (Labrador Current)

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

16. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಅನುಚ್ಛೇದ 40	I. ಮೂಲಭೂತ ಕರ್ತವ್ಯಗಳು
ಬಿ) ಅನುಚ್ಛೇದ 51ಎ	II. ಪಂಚಾಯಿತಿಗಳ ರಚನೆ
ಸಿ) ಅನುಚ್ಛೇದ 61	III. ಉಪರಾಷ್ಟ್ರಪತಿ ಚುನಾವಣೆ
ಡಿ) ಅನುಚ್ಛೇದ 66	IV. ರಾಷ್ಟ್ರಪತಿಯವರ ಮಹಾಭಿಯೋಗ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (III) (I)
ಡಿ) (III) (I) (IV) (II)

ಉತ್ತರ : ಬಿ) (II) (I) (IV) (III)

17. ಈ ಕೆಳಕಂಡ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ (ಅನುಚ್ಛೇದಗಳಿಗೆ ಸಂಬಂಧಿಸಿದಂತೆ)

1) ಅನುಚ್ಛೇದ 352 (3) – ಕ್ಯಾಬಿನೆಟ್ ಎಂಬ ಪದ ಬಳಕೆ
2) ಅನುಚ್ಛೇದ 312 – ಅಖಿಲ ಭಾರತ ಸೇವೆಗಳು
3) ಅನುಚ್ಛೇದ 76 – ಅಡ್ವೋಕೇಟ್ ಜನರಲ್
4) ಅನುಚ್ಛೇದ 155 – ರಾಜ್ಯಪಾಲರ ನೇಮಕ

ಉತ್ತರ : 3) ಅನುಚ್ಛೇದ 76 – ಅಡ್ವೋಕೇಟ್ ಜನರಲ್

ಅನುಚ್ಛೇದ 76 – ಅಟಾರ್ನಿ ಜನರಲ್

18. ಈ ಕೆಳಗಿನವುಗಳಲ್ಲಿ ಯಾವುದು ವಾಯುಮಂಡಲದ ಅತ್ಯಂತ ಕೆಳಗಿನ ಪದರವಾಗಿದೆ.

ಎ) ಸಮೋಷ್ಣ ಗೋಳ (Stratosphere)

ಬಿ) ಮಧ್ಯಗೋಳ (Mesosphere)

ಸಿ) ಪರಿವರ್ತನಾ ಗೋಳ (Troposphere)

ಡಿ) ಉಷ್ಣ ಗೋಳ (Thermosphere)

ಉತ್ತರ : ಸಿ) ಪರಿವರ್ತನಾ ಗೋಳ (Troposphere)


THE EARTH'S ATMOSPHERE
EXOSPHERE
EXOBASE
THERMOSPHERE
KARMAN LINE
MESOSPHERE
STRATOSPHERE
OZON LAYER
TROPOSPHERE

19. ಮಂತ್ರಿಗಳನ್ನು ಈ ಕೆಳಕಂಡ ಯಾವುದರಿಂದ ಆಯ್ಕೆ ಮಾಡಿಕೊಳ್ಳಬಹುದು

ಎ) ಲೋಕಸಭೆ

ಬಿ) ರಾಜ್ಯಸಭೆ

ಸಿ) ಶಾಸಕಾಂಗದ ಹೊರಗೆ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

1) (ಎ) ಮಾತ್ರ

2) (ಬಿ) ಮಾತ್ರ

3) (ಎ) ಮತ್ತು (ಬಿ) ಮಾತ್ರ

4) (ಎ), (ಬಿ) ಮತ್ತು (ಸಿ)

ಉತ್ತರ : 4) (ಎ), (ಬಿ) ಮತ್ತು (ಸಿ)

20. ಸಂವಿಧಾನದ 102ನೇ ತಿದ್ದುಪಡಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. ಸಂವಿಧಾನದ 102ನೇ ತಿದ್ದುಪಡಿಗೆ ಸಂಬಂಧಿಸಿದ ಮಸೂದೆ 122.
2. ಸಂವಿಧಾನದ 102ನೇ ತಿದ್ದುಪಡಿಯು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಂವಿಧಾನಾತ್ಮಕ ಸ್ಥಾನಮಾನ ನೀಡಿದೆ.
3. ಸಂವಿಧಾನದ 102ನೇ ತಿದ್ದುಪಡಿಯಿಂದ 338B ವಿಧಿಯನ್ನು ಸೇರಿಸಲಾಯಿತು. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವು ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮೂವರು ಸದಸ್ಯರನ್ನು ಒಳಗೊಂಡಿರುತ್ತದೆ. ಇವರನ್ನು ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಮತ್ತು ಸದಸ್ಯರ ಅಧಿಕಾರಾವಧಿ – 3 ವರ್ಷಗಳು
4. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವು ಕೇಂದ್ರದ ಸಾಮಾಜಿಕ ನ್ಯಾಯಾ ಮತ್ತು ಸಬಲೀಕರಣ ಸಚಿವಾಲಯದ ಅಡಿಯಲ್ಲಿ ಬರುತ್ತದೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.

102ನೇ ತಿದ್ದುಪಡಿಗೆ ಸಂಬಂಧಿಸಿದ ಮಸೂದೆ – 123ನೇ ಮಸೂದೆ

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

21. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಅನುಚ್ಛೇದ 352	I. ಸಂವಿಧಾನ ತಿದ್ದುಪಡಿ
ಬಿ) ಅನುಚ್ಛೇದ 356	II. ರಾಜ್ಯ ತುರ್ತು ಪರಿಸ್ಥಿತಿ
ಸಿ) ಅನುಚ್ಛೇದ 360	III. ಹಣಕಾಸಿನ ತುರ್ತು ಪರಿಸ್ಥಿತಿ
ಡಿ) ಅನುಚ್ಛೇದ 368	IV. ರಾಷ್ಟ್ರೀಯ ತುರ್ತು ಪರಿಸ್ಥಿತಿ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (III) (I)
ಡಿ) (III) (I) (IV) (II)

ಉತ್ತರ : ಸಿ) (IV) (II) (III) (I)

22. ವಿಧಾನ ಪರಿಷತ್‌ಗೆ ಸಂಬಂಧಿಸಿದ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ

1. ವಿಧಾನ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆಯು ವಿಧಾನ ಸಭೆಯ ಒಟ್ಟು ಸದಸ್ಯರ 1/3ರಷ್ಟನ್ನು ಮೀರಕೂಡದು
2. ವಿಧಾನ ಪರಿಷತ್ತಿನ ಸದಸ್ಯರ ಅಧಿಕಾರವಧಿ 6 ವರ್ಷಗಳು
3. ವಿಧಾನ ಪರಿಷತ್ತಿನ ಸದಸ್ಯರು ಪ್ರತಿ ಎರಡು ವರ್ಷಕ್ಕೊಮ್ಮೆ 1/3ರಷ್ಟು ಸದಸ್ಯರು ನಿವೃತ್ತಿಯಾಗುತ್ತಾರೆ.
4. ವಿಧಾನ ಪರಿಷತ್ತಿಗೆ ರಾಜ್ಯಪಾಲರು 1/6 ರಷ್ಟು ಸದಸ್ಯರನ್ನು ನಾಮಕರಣ ಮಾಡುತ್ತಾರೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ. ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.

ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ. ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

23. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

ಎ) ಬ್ರಿಟಿಷ್ ಲೇಖಕಿ ಸಮಂತಾ ಹಾರ್ವೆರವರು 2024ನೇ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಲೇಖಕಿ ಸಮಂತಾ ಹಾರ್ವೆರವರ ಬಾಹ್ಯಾಕಾಶ ಕೇಂದ್ರದ ಕಥನವುಳ್ಳ 'ಆರ್ಬಿಟಲ್' ಕೃತಿಗೆ ಪ್ರಶಸ್ತಿಯು ದೊರಕಿದೆ.

ಬಿ) ಐರಿಷ್ ದೇಶದ ಕಾಂದಬರಿಕಾರ ಪೌಲ್ ಲಿಂಚ್‌ರವರು (ಪ್ರಾಫೆಟ್ ಸಾಂಗ್ ಕಾದಂಬರಿ) 2023ನೇ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದರು.

ಸಿ) ಜರ್ಮನಿ ದೇಶದ ಜೆನ್ನಿ ಎರ್ಪೆನ್ಬೆಕ್‌ರವರು 2024ನೇ ಸಾಲಿನ ಇಂಟರ್‌ನ್ಯಾಷನಲ್ ಬೂಕರ್ (ಮ್ಯಾನ್‌ಬೂಕರ್ ಇಂಟರ್‌ನ್ಯಾಷನಲ್) ಪ್ರಶಸ್ತಿಗೆ ಭಾಜನರಾಗಿದ್ದಾರೆ. (ಜೆನ್ನಿ ಎರ್ಪೆನ್ಬೆಕ್‌ರವರ ಕೃತಿಯಾದ ಕೈರೋಸ್‌ನ್ನು ಭಾಷಾಂತರಿಸಿದವರು ಜರ್ಮನಿ ದೇಶದ ಮೈಕೆಲ್ ಹಾಫ್ಮನ್)

ಡಿ) ಬಲ್ಗೇರಿಯಾ ದೇಶದ ಜಾರ್ಜಿ ಗೋಸ್ಪೊಡಿನೋವ್‌ರವರು 2023ನೇ ಸಾಲಿನ ಇಂಟರ್‌ನ್ಯಾಷನಲ್ ಬೂಕರ್ (ಮ್ಯಾನ್‌ಬೂಕರ್ ಇಂಟರ್‌ನ್ಯಾಷನಲ್) ಪ್ರಶಸ್ತಿಗೆ ಭಾಜನರಾಗಿದ್ದರು. (ಜಾರ್ಜಿ ಗೋಸ್ಪೊಡಿನೋವ್‌ರವರ ಟೈಮ್ ಶೆಲ್ಟರ್ ಕಾದಂಬರಿಯನ್ನು ಇಂಗ್ಲೀಷ್‌ಗೆ ಭಾಷಾಂತರಿಸಿದವರು ಏಂಜೆಲಾ ರೋಡೆಲ್‌ರವರು)

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

24. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

ಎ) ಭಾರತದ ಮಹಾನಿಯಂತ್ರಕ ಮತ್ತು ಲೆಕ್ಕ ಪರಿಶೋಧಕರನ್ನು ಮಾನ್ಯ ರಾಷ್ಟ್ರಪತಿಯವರು ಕೇಂದ್ರ ಸರಕಾರದ ಶಿಫಾರಸ್ಸಿನ ಮೇರೆಗೆ ನೇಮಕ ಮಾಡುತ್ತಾರೆ. (ಸಂವಿಧಾನದ 148ನೇ ವಿಧಿ)

ಬಿ) 1989ರ ಬ್ಯಾಚ್‌ನ ಹಿಮಾಚಲ ಪ್ರದೇಶ ರಾಜ್ಯದ ಕೇಡರ್‌ನ ಐಎಎಸ್ ಅಧಿಕಾರಿ ಕೆ. ಸಂಜಯ್ ಮೂರ್ತಿರವರು 2024 ನವೆಂಬರ್ 21ರಂದು ಭಾರತದ ಹೊಸ ಸಿಎಜಿಯಾಗಿ ಅಧಿಕಾರ ಸ್ವೀಕರಿಸಿದರು

ಸಿ) ಮಹಾನಿಯಂತ್ರಕ ಮತ್ತು ಲೆಕ್ಕ ಪರಿಶೋಧಕರವರ ಅಧಿಕಾರವಧಿ 6 ವರ್ಷ ಅಥವಾ 65 ವರ್ಷಗಳು.(ಯಾವುದು ಮೊದಲೊ ಅದು)

ಡಿ) ಭಾರತದ ಮಹಾನಿಯಂತ್ರಕ ಮತ್ತು ಲೆಕ್ಕ ಪರಿಶೋಧಕರನ್ನು ಪದಚ್ಯುತಿ ಗೊಳಿಸಬೇಕಾದರೆ, ಸುಪ್ರೀಂಕೋರ್ಟ್‌ನ ನ್ಯಾಯಾಧೀಶರನ್ನು ಪದಚ್ಯುತಿಗೊಳಿಸುವ ವಿಧಾನವನ್ನು ಅನುಸರಿಸಬೇಕಾಗುತ್ತದೆ.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

25. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ :

ಎ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಶ್ರೀ ಭೂಪೇಂದರ್ ಯಾದವ್‌ರವರು ಮಧ್ಯಪ್ರದೇಶ ರಾಜ್ಯದ ರತಪಾನಿ ಹುಲಿ ಸಂರಕ್ಷಿತ ಪ್ರದೇಶವನ್ನು ಭಾರತದ 57ನೇ ಹುಲಿ ಸಂರಕ್ಷಿತ ಪ್ರದೇಶವಾಗಿ 2024 ಡಿಸೆಂಬರ್ 3ರಂದು ಅಧಿಸೂಚಿಸಿರುವುದಾಗಿ ತಿಳಿಸಿದರು.ಇದು ಮಧ್ಯಪ್ರದೇಶದ 8ನೇ ಹುಲಿ ಸಂರಕ್ಷಿತ ಪ್ರದೇಶವಾಗಿದೆ. ಇದು ಆಂಧ್ರಪ್ರದೇಶ ರಾಜ್ಯದ ನಾಗಾರ್ಜುನಸಾಗರ್–ಶ್ರೀಶೈಲಂ ಹುಲಿ ಸಂರಕ್ಷಿತ ಪ್ರದೇಶ ಮತ್ತು ಅಸ್ಸಾಂ ರಾಜ್ಯದ ಮಾನಸ ಹುಲಿ ಸಂರಕ್ಷಿತ ಪ್ರದೇಶದ ನಂತರ ಇದು ಭಾರತದ ಮೂರನೇ ಅತಿ ದೊಡ್ಡ ಹುಲಿ ಸಂರಕ್ಷಿತ ಪ್ರದೇಶವಾಗಿದೆ.

ಬಿ) ಛತ್ತೀಸ್‌ಗಢ ರಾಜ್ಯದ ಗುರು ಘಾಸಿದಾಸ್–ತಮೋರ್ ಪಿಂಗ್ಲಾ ಹುಲಿ ಸಂರಕ್ಷಿತ ಪ್ರದೇಶವನ್ನು ಭಾರತದ 56ನೇ ಹುಲಿ ಸಂರಕ್ಷಿತ ಪ್ರದೇಶವಾಗಿ 2024 ನವೆಂಬರ್ 18 ರಂದು ಅಧಿಸೂಚಿಸಲಾಗಿದೆ.

ಸಿ) ಗುರು ಘಾಸಿದಾಸ್–ತಮೋರ್ ಪಿಂಗ್ಲಾ ಹುಲಿ ಸಂರಕ್ಷಿತ ಪ್ರದೇಶ ಛತ್ತೀಸ್‌ಗಢ ರಾಜ್ಯದ 4ನೇ ಹುಲಿ ಸಂರಕ್ಷಿತ ಪ್ರದೇಶವಾಗಿದೆ.

ಡಿ) ವಿಶ್ವ ಹುಲಿ ದಿನವನ್ನು ಜುಲೈ 28ರಂದು ಆಚರಿಸಲಾಗುತ್ತದೆ.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.

ವಿಶ್ವ ಹುಲಿ ದಿನವನ್ನು ಜುಲೈ 29ರಂದು ಆಚರಿಸಲಾಗುತ್ತದೆ.

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

26. 19ನೇ ಜಿ–20 ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. 2024 ನವೆಂಬರ್ 18 ಮತ್ತು 19ರಂದು 19ನೇ ಜಿ–20 ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಯು ಬ್ರೆಜಿಲ್ ದೇಶದ ರಿಯೋ–ಡಿ–ಜನೈರೊದಲ್ಲಿ ನಡೆಯಿತು.
2. ಬ್ರೆಜಿಲ್ ದೇಶದ ಅಧ್ಯಕ್ಷರು – ಲೂಯಿಸ್ ಇನಾಸಿಯೋ ಲೂಲಾ ಡಾ ಸಿಲ್ವಾ
3. 20ನೇ ಜಿ–20 ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಯು 2025ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿದೆ.
4. 2023 ಸೆಪ್ಟೆಂಬರ್ 9 ಮತ್ತು 10ರಂದು 18ನೇ ಜಿ–20 ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಯು ಭಾರತದಲ್ಲಿ ನಡೆದಿತ್ತು.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

27. ಅಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ನಾರ್ವೆ ದೇಶದ ಪ್ರಸಿದ್ಧ ಗಣಿತ ತಜ್ಞ ನೀಲ್ಸ್ ಹೆನ್ರಿಕ್ ಅಬೆಲ್‌ರವರ ಹೆಸರಿನಲ್ಲಿ ಅಬೆಲ್ ಪ್ರಶಸ್ತಿಯನ್ನು (ಗಣಿತ ಶಾಸ್ತ್ರದ ನೊಬೆಲ್) ನೀಡಲಾಗುತ್ತಿದೆ.

2) ಅಬೆಲ್ ಪ್ರಶಸ್ತಿಯನ್ನು ಮೊದಲು ಪಡೆದವರು – ಜೀನ್– ಪಿಯರ್ ಸೆರ್ರೆ (ಫ್ರಾನ್ಸ್ ದೇಶದವರು)

3) ಅಬೆಲ್ ಪ್ರಶಸ್ತಿ ಪಡೆದ ಮೂಲತಃ ಭಾರತದವರು – ಎಸ್.ಆರ್ ಶ್ರೀನಿವಾಸ್ ವರದನ್ – 2007, ತಮಿಳುನಾಡು (ಸಂಭವನೀಯತೆ ಸಿದ್ಧಾಂತ)

4) 2024ರ ಅಬೆಲ್ ಪ್ರಶಸ್ತಿ ಪಡೆದವರು – ಮೈಕೆಲ್ ತಲಗ್ರಾಂಡ್ (ಫ್ರೆಂಚ್ ಗಣಿತ ತಜ್ಞ) (ಪ್ರಶಸ್ತಿಯ ಮೊತ್ತ – 7.5 ಮಿಲಿಯನ್ ನಾರ್ವೆಜಿಯನ್ ಕ್ರೋನಾರ್)

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1, 2 ಮತ್ತು 3 ಸರಿಯಾಗಿವೆ. ಡಿ) 1, 2, 3 ಮತ್ತು 4 ಸರಿಯಾಗಿವೆ.

ಉತ್ತರ : ಡಿ) 1, 2, 3 ಮತ್ತು 4 ಸರಿಯಾಗಿವೆ.

28. ಪ್ರಧಾನ ಮಂತ್ರಿ ಮುದ್ರಾ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) MUDRA - Micro Units Development & Refinance Agency

2) ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ನೀಡುವ ಸಾಲಗಳು 1) ಶಿಶು ಸಾಲ – 50,000 ದವರೆಗೆ 2) ಕಿಶೋರ್ ಸಾಲ – 50,000 ದಿಂದ 5 ಲಕ್ಷ ವರೆಗೆ 3) ತರುಣ್ ಸಾಲ – 5 ಲಕ್ಷದಿಂದ 10 ಲಕ್ಷದವರೆಗೆ 4) ತರುಣ್ ಪ್ಲಸ್ ಸಾಲ – 10 ಲಕ್ಷದಿಂದ 20 ಲಕ್ಷದವರೆಗೆ ಸಾಲ ನೀಡಲಾಗುತ್ತದೆ.

3) 2024 ಜುಲೈ 23ರಂದು ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್‌ನಲ್ಲಿ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್‌ರವರು ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ನೀಡುವ ಸಾಲದ ಮಿತಿಯನ್ನು 20 ಲಕ್ಷಕ್ಕೆ ಹೆಚ್ಚಿಸುವುದಾಗಿ ಘೋಷಿಸಿದ್ದರು. ಇದರ ಪ್ರಕಾರ ಹೊಸ ಮಿತಿಯು 2024 ಅಕ್ಟೋಬರ್ 24 ರಂದು ಜಾರಿಗೆ ಬಂದಿದೆ. (ಈಗಾಗಲೇ ಸಾಲ ಪಡೆದು ಯಶಸ್ವಿಯಾಗಿ ಮರುಪಾವತಿ ಮಾಡಿದವರಿಗೆ ಅಷ್ಟೇ 20 ಲಕ್ಷ ಸಾಲ ದೊರೆಯಲಿದೆ)

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

29. ಇಂದಿರಾ ಗಾಂಧಿ ಶಾಂತಿ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ.

1. ಅಂತಾರಾಷ್ಟ್ರೀಯ ಶಾಂತಿ, ನಿಶಸ್ತ್ರೀಕರಣ ಮತ್ತು ಅಭಿವೃದ್ಧಿಗಾಗಿ ಶ್ರಮಿಸಿದವರಿಗೆ 1986 ರಿಂದ ಇಂದಿರಾಗಾಂಧಿ ಶಾಂತಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ.ಈ ಪ್ರಶಸ್ತಿಯ ಮೊತ್ತ 25 ಲಕ್ಷ ರೂಪಾಯಿಗಳು.
2. 2023ನೇ ಸಾಲಿನ ಇಂದಿರಾಗಾಂಧಿ ಶಾಂತಿ ಪ್ರಶಸ್ತಿಯನ್ನು ಅರ್ಜೇಂಟೈನಾ ಮೂಲದ ಡೇನಿಯಲ್ ಬ್ಯಾರೆನ್‌ಬೊಯಿಮ್ ಮತ್ತು ಪ್ಯಾಲಿಸ್ಟೀನ್ ಮೂಲದ ಅಲಿ ಅಬು ಅವ್ವದ್‌ರವರಿಗೆ ನೀಡಲಾಯಿತು.
3. 2024ನೇ ಸಾಲಿನ ಇಂದಿರಾಗಾಂಧಿ ಶಾಂತಿ ಪ್ರಶಸ್ತಿಗೆ ಚಿಲಿ ದೇಶದ ಮಾಜಿ ಅಧ್ಯಕ್ಷರು ಮತ್ತು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಹೈಕಮೀಷನರ್ ಆಗಿ ಕರ್ತವ್ಯ ನಿರ್ವಹಿಸಿದ ಮಿಚೆಲ್ ಬ್ಯಾಚೆಲೆಟ್ ರವರು ಆಯ್ಕೆಯಾಗಿದ್ದಾರೆ.
4. 1999ನೇ ಸಾಲಿನ ಇಂದಿರಾಗಾಂಧಿ ಶಾಂತಿ ಪ್ರಶಸ್ತಿಯನ್ನು ಹಸಿರು ಕ್ರಾಂತಿಯ ಪಿತಾಮಹ ಎಂ.ಎಸ್ ಸ್ವಾಮಿನಾಥನ್‌ರವರಿಗೆ ನೀಡಲಾಗಿದೆ.

ಈ ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ

ಎ) ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
ಬಿ) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಸಿ) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ) ಎಲ್ಲಾ ಹೇಳಿಕೆಗಳು ಸರಿಯಾಗಿವೆ.

30. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2023 ನವೆಂಬರ್ 30 ರಿಂದ ಡಿಸೆಂಬರ್ 13ರವರೆಗೆ COP–28 ಸಮಾವೇಶ ಯುಎಇಯ ದುಬೈನಲ್ಲಿ ನಡೆದಿತ್ತು.

2) 2024 ನವೆಂಬರ್ 11 ರಿಂದ 22ರವರೆಗೆ COP–29 ಸಮಾವೇಶ ಅಜರ್ ಬೈಜಾನ್ ದೇಶದ ಬಾಕು ಎಂಬಲ್ಲಿ ನಡೆಯಿತು.

3) 2025 ನವೆಂಬರ್ 10 ರಿಂದ 21ರವರೆಗೆ COP–30 ಸಮಾವೇಶ ಬ್ರೆಜಿಲ್ ದೇಶದ 'ಬಿಲೆಂ' ಎಂಬಲ್ಲಿ ನಡೆಯುತ್ತದೆ.

4) 2002ರಲ್ಲಿ COP–8 ಸಮಾವೇಶ ನವದೆಹಲಿಯಲ್ಲಿ ನಡೆದಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1, 2 ಮತ್ತು 3 ಸರಿಯಾಗಿವೆ. ಡಿ) 1, 2, 3 ಮತ್ತು 4 ಸರಿಯಾಗಿವೆ.

ಉತ್ತರ : ಡಿ) 1, 2, 3 ಮತ್ತು 4 ಸರಿಯಾಗಿವೆ.

ದ್ರೋಣಾಚಾರ್ಯ ಅಕಾಡೆಮಿ – ಬೆಂಗಳೂರು

ಸಾಮಾನ್ಯ ಅಧ್ಯಯನ

ವಿಶೇಷವಾಗಿ ಗಮನಿಸಿ –

ಈ ಪಿಡಿಎಫ್‌ನಲ್ಲಿರುವ ಪ್ರಶ್ನೆಗಳು ಮತ್ತು ಉತ್ತರಗಳು **2024 ಡಿಸೆಂಬರ್ 16** ರವರೆಗೆ ಅಪ್‌ಡೇಟ್ ಮಾಡಲಾಗಿದೆ. (ಈ ಆನ್‌ಲೈನ್ ಟೆಸ್ಟ್ ಸಿರೀಸ್ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 9900476218 ವಾಟ್ಸಪ್ ನಂಬರ್‌ಗೆ ತಿಳಿಸಿ)

ಸಾಧನೆಯ ಹಾದಿಗೊಂದು ಹೊತ್ತಿಗೆ

General Studies

2024 12ನೇ ಪರಿಷ್ಕೃತ ಆವೃತ್ತಿ

NCERT-DSERT ನೂತನ ಪಠ್ಯಕ್ರಮ, APPS/WEB INFORMATION ನ ಪ್ರಚಲಿತ ಮಾಹಿತಿ
KSP, KPSC, KEA, UPSC ಪ್ರಶ್ನೆಪತ್ರಿಕೆಗಳ ಅನ್ವಯ ಪರಿಷ್ಕರಿಸಿ ರಚಿಸಲಾಗಿದೆ

ಭಾರತದಲ್ಲಿರುವ ರಾಜ್ಯಗಳು ವಿಶೇಷವಾಗಿ

ಕರ್ನಾಟಕ

ಪುಸ್ತಕದ ವಿಶೇಷತೆಗಳು

- ಭಾರತದ 28 ರಾಜ್ಯಗಳ ಮಾಹಿತಿ
- ಭಾರತದ 8 ಕೇಂದ್ರಾಡಳಿತ ಪ್ರದೇಶಗಳು
- ಕರ್ನಾಟಕದ 31 ಜಿಲ್ಲೆಗಳ ಮಾಹಿತಿ
- ಸಾಮಾನ್ಯ ಅಧ್ಯಯನದ ವಿಷಯಗಳು
- ಭಾರತದ ಸಂವಿಧಾನ
- ಭಾರತದ ಇತಿಹಾಸ
- ಭಾರತದ ಭೂಗೋಳ
- ಸಾಮಾನ್ಯ ಅರ್ಥಶಾಸ್ತ್ರ
- ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ
- ಕಂಪ್ಯೂಟರ್ ಮತ್ತು ಪೊಲೀಸ್ ಇಲಾಖೆ
- ಯುನೆಸ್ಕೋ ಪಟ್ಟಿ, ರಾಮ್ಸರ್ ತಾಣಗಳು
- ಪ್ರಶಸ್ತಿಗಳು ಮತ್ತು ಕ್ರೀಡಾಕೂಟಗಳು
- ಪ್ರಮುಖ ಮಿಲಿಟರಿ ಸಮರಾಭ್ಯಾಸಗಳು
- ಕರ್ನಾಟಕ ಬಜೆಟ್-2024-25

ಕರ್ನಾಟಕದ ಅತ್ಯುತ್ತಮ GK ಪುಸ್ತಕ

KAS | PDO | VAO | PSI | FDA | SDA | TET | GROUP-C | POLICE

YouTube @HussainappaNayakaAcademy ಹುಸೇನಪ್ಪ ನಾಯಕ

ಹುಸೇನಪ್ಪ ನಾಯಕ • ಪ್ರಚಲಿತ ಘಟನೆಗಳ ಸಮಗ್ರ ಅಧ್ಯಯನ

thanks
FOR WATCHING